ಸಮಾಧಾನ. ಎಸ್ಸೆಸ್ಸೆಲ್ಸಿಯಲ್ಲಿ ಒಳ್ಳೆ ಅಂಕಗಳನ್ನು ತೆಗೆದು ಪಿ.ಯು.ಸಿ. ಮುಗಿಸಿ ಡಿಗ್ರಿಗಾಗಿ ಬೆಂಗಳೂರಿನ ಹಾಸ್ಟೆಲ್ ಸೇರಿದಾಗ ಮನೆಯಲ್ಲಿ ಎಲ್ಲರೂ ನಿಟ್ಟುಸಿರು ಬಿಟ್ಟಿದ್ದರು.

ಕಾಲೇಜು ಶಿಕ್ಷಣ ಆರಂಭವಾಯಿತು. ಹರೆಯ ಮೈದುಂಬಿದರೂ ಅರಳುವ ಹೂವುಗಳು, ಹಾರುವ ಚಿಟ್ಟೆಗಳ ನಡುವೆ ಗಾಂಧೀಜಿಯನ್ನು ನೆನೆಯುತ್ತ ತನ್ನ ಸಂಯಮ ಕಾಪಾಡಿಕೊಳ್ಳುತ್ತಿದ್ದ ಸತ್ಯ. ಸ್ವಾತಂತ್ರ್ಯ ದಿನಾಚರಣೆಯಂದು ನಡೆದ ಭಾಷಣ ಸ್ಪರ್ಧೆಯಲ್ಲಿ ಗೆದ್ದು ಬಹುಮಾನ ಗಳಿಸಿದಾಗ ಅವನಿಗೆ ಸೋತವಳು ನಳಿನಿ. ಗುಳಿಕೆನ್ನೆಯ ಚೆಲುವೆ. ಗಾಂಧೀಜಿಯ ಕಥೆಯನ್ನೆಲ್ಲ ಆಸಕ್ತಿಯಿಂದ ಕೇಳಿ ವಿಶ್ಲೇಷಿಸುತ್ತಿದ್ದಳು. ಗಾಂಧೀಜಿಯ ಬಗ್ಗೆ ಅನೇಕ ಪುಸ್ತಕಗಳನ್ನು ಓದಿಯಾದ ಮೇಲೆ ಪ್ರೀತಿ ಚಿಗುರಿತು. ಮೊಳೆತು ಸಸಿಯಾಯಿತು. ಲಾಲ್‌ಬಾಗು, ಕಬ್ಬನ್ ಪಾರ್ಕುಗಳೆಲ್ಲ ಜೋಡಿಯನ್ನು ನೋಡಿ ಹರಸಿದವು. ಇಬ್ಬರ ಜಾತಿ ಬೇರೆಯಾಗಿದ್ದುದು ತಡೆಗೋಡೆಯಾಗಲಿಲ್ಲ. ಬದಲಿಗೆ ಗಾಂಧೀವಾದದಂತೆ ಅಂತರ್ಜಾತೀಯ ವಿವಾಹವಾಗುವುದು ಶ್ರೇಷ್ಠವೆನಿಸಿತು. ಬಿ.ಕಾಂ. ಪದವಿ ಮುಗಿದಾಕ್ಷಣ ಎಂ.ಕಾಂ. ಓದುತ್ತಲೇ ಕೆಲಸದ ಬೇಟೆ ಆರಂಭಿಸಿದ ಸತ್ಯ. ಆದರೆ, ಅಂದಿನ ದಿನಗಳಲ್ಲಿ ಕೆಲಸ ದೊರೆಯುವುದು ಅಷ್ಟು ಸುಲಭವಾಗಿರಲಿಲ್ಲ. ಅರ್ಜಿ ಹಾಕಿ ಅಲೆದದ್ದೇ ಬಂತು. ಎಂ.ಕಾಂ. ಮುಗಿದರೂ ಉದ್ಯೋಗ ದೊರೆಯಲಿಲ್ಲ. ನಳಿನಿಯೂ ಅವನ ಉದ್ಯೋಗಕ್ಕಾಗಿ ತೀವ್ರವಾಗಿ ಪ್ರಯತ್ನಿಸುತ್ತಿದ್ದಳು.

ಕೊನೆಗೆ ಪರಿಚಿತರೊಬ್ಬರ ಮೂಲಕ ಕಾಲೇಜಿನಲ್ಲಿ ಉಪನ್ಯಾಸಕನ ಹುದ್ದೆಗೆ ಕರೆ ಬಂತು. ಜೊತೆಗೆ ಒಂದಷ್ಟು ಲಂಚ ಕೊಡಬೇಕೆನ್ನುವ ಮಾತೂ ಇತ್ತು. ಸಂದರ್ಶನವನ್ನು ಚೆನ್ನಾಗಿಯೇ ಮುಗಿಸಿದ ಸತ್ಯ ತಾನು ಗಾಂಧೀವಾದಿಯೆಂದೂ ತನ್ನ ತತ್ವಗಳಿಗೆ ವಿರುದ್ಧವಾಗಿ ಒಂದು ಪೈಸೆ ಲಂಚವನ್ನೂ ಕೊಡಲಾರೆನೆಂದು ಖಡಾಖಂಡಿತವಾಗಿ ಹೇಳಿಬಿಟ್ಟ. ನಳಿನಿ ಕೋಪದಿಂದ ಕೂಗಾಡಿದಳು. ಪ್ರೀತಿಯಿಂದ ಓಲೈಸಿದಳು. ಆಣೆ, ಭಾಷೆಯಿಟ್ಟಳು. “ಇಂತಹ ಅವಕಾಶ ಮತ್ತೆ ದೊರೆಯುವುದಿಲ್ಲ. ಒಂದೇ ಬಾರಿ... ಇದೊಂದೇ ಬಾರಿ ಕೊಡೋಣ. ಮುಂದೆ ಜೀವನವೆಲ್ಲ ಗಾಂಧಿವಾದವೇ” ಎಂದು ಬೇಡಿಕೊಂಡಳು. ಸತ್ಯ ಕರಗಲಿಲ್ಲ. “ಅವೆಲ್ಲ ಕೇಳಲು ಚೆಂದ. ಜೀವನದಲ್ಲಿ ಅಳವಡಿಸಿಕೊಳ್ಳುವುದು ಮಹಾಕಷ್ಟ” ಎಂದು ತಿಳಿಹೇಳಿದಳು. ಅವನು ಕಲ್ಲುಕಂಬದಂತೆ ಕುಳಿತಿದ್ದ. ಅವಳು ಕುಪಿತಳಾಗಿ ಮೌನವಾದಳು. ಯೋಚನೆಗಳ ಜಾಡು ಬದಲಾಗಿ ಕೊನೆಗಿಬ್ಬರೂ ಬೇರೆಯಾದರು. ಸತ್ಯ ನೋಯಲಿಲ್ಲವೆಂದೇನಲ್ಲ. ಆದರೂ ಪ್ರೀತಿಗಾಗಿ ತನ್ನ ಸಿದ್ಧಾಂತಗಳನ್ನು ತ್ಯಜಿಸುವುದು ಅವನಿಂದಾಗಲಿಲ್ಲ. ಕನಸು ಒಡೆದಿತ್ತು. ತನ್ನ ದೇವರ ಫೋಟೊದೆದುರು ಅವರ ಕಾಲಿನೊಂದಿಗೆ ಕೋಲನ್ನೂ ಹಿಡಿದು ಬಿಕ್ಕಳಿಸಿದ್ದ.

ಆಗಲೇ ಲಕ್ಷ್ಮಿಯ ಸಂಬಂಧ ಬಂದಿದ್ದು. ಅವಳ ತಂದೆ ಕೇಶವರೆಡ್ಡಿಗಳು ಬೆಂಗಳೂರಿನಲ್ಲೇ ಗಟ್ಟಿ ಕುಳ. ಸತ್ಯನ ಮನೆಯಲ್ಲಿ ಎಲ್ಲರಿಗೂ ಸಂತೋಷವಾಗಿತ್ತು. ನಿಜ ಹೇಳಬೇಕೆಂದರೆ ಈ ಗಾಂಧಿಪುತ್ರನನ್ನು ಮನೆಯಿಂದ ಹಾಸ್ಟೆಲ್‌ಗೆ ಕಳಿಸಿದಂತೆ ಮನಸ್ಸಿನಿಂದಲೂ ದೂರ ಮಾಡಿತ್ತು ಅವರ ಕುಟುಂಬ. ಈಗ ಮಗ ಮತ್ತೆ ಮಾಮೂಲು ದಾರಿಗೆ ಮರಳಬಹುದೆಂಬ ಆಶಯದಿಂದ ಶ್ರೀಪತಿರೆಡ್ಡಿ ಮತ್ತವರ ಹೆಂಡತಿ ಆನಂದಿತರಾಗಿದ್ದರು. ಕೇಶವರೆಡ್ಡಿಗಳೂ ಮಧ್ಯವರ್ತಿಗಳ ಮೂಲಕ ಹುಡುಗನ ಗುಣಸ್ವಭಾವಗಳನ್ನು ಕೇಳಿ ತಿಳಿದಿದ್ದರು. “ಹರೆಯದಲ್ಲಿ ಗಾಂಧೀವಾದಗಳೆಲ್ಲ ಮಾಮೂಲು. ಬದುಕಿನ ಪ್ರವಾಹದಲ್ಲಿ ಬಿದ್ದ ಮೇಲೆ ತಾವೇ ಸರಿಯಾಗ್ತಾರೆ ಬಿಡಿ” ಎಂದು ನಕ್ಕದ್ದಿತ್ತು. ಮುಂದೆ ಸತ್ಯನಿಗೆ ಶುಕ್ರದಸೆ. ರೆವಿನ್ಯೂ ಇಲಾಖೆಯಲ್ಲಿ ಪರೀಕ್ಷೆ ಬರೆದಾಕ್ಷಣ ಸಂದರ್ಶನಕ್ಕೆ ಕರೆ ಬಂದಿತ್ತು. ಅಲ್ಲಿ ಕೇಳಿದ ಐದು ಪ್ರಶ್ನೆಗಳಲ್ಲಿ ಎರಡಕ್ಕೇ ಉತ್ತರಿಸಿದರೂ ಆಯ್ಕೆಯಾಗಿದ್ದ. ಇದರ ಹಿಂದಿದ್ದ ಕೈಗಳ ಅರಿವಾದದ್ದು ಮದುವೆಯ ನಂತರವೇ...

ಧಾಂ..ಧೂಂ.. ಎಂದು ಭರ್ಜರಿಯಾಗಿ ಮೂರು ದಿನ ನಡೆದ ಮದುವೆ ಸಮಾರಂಭ ನೋಡಿ ಶ್ರೀಪತಿರೆಡ್ಡಿಗಳಿಗೆ ಸಂತೋಷವಾದರೆ ಪತ್ನಿ ಆನಂದಬಾಷ್ಪ ಸುರಿಸಿದ್ದಳು. ಸತ್ಯವ್ರತನಾದ ವಿಕ್ಷಿಪ್ತ ಮಗನಿಂದ ಈ ಸುಖ ದೊರೆಯುವ ನಿರೀಕ್ಷೆ ಇರಲಿಲ್ಲ ಅವರಿಗೆ. ಆದರೆ, ಎಲ್ಲ ತುಂಬ್‌ತುಂಬಿಯೇ

